ಅರಣ್ಯ ನಾಶವಾಗುವುದನ್ನು ಖಚಿತಪಡಿಸಿಕೊಳ್ಳುವುದರಿಂದ ಪರಿಸರ ನಾಶವಾಗಲಿ, ವಿಕಿರಣ ಪ್ರಭಾವವಾಗಲಿ ಇರುವುದಿಲ್ಲ ಎನ್ನುವುದು ಪರಮಾಣು ಶಕ್ತಿ ಇಲಾಖೆಯ ನಿಲುವಾಗಿತ್ತು. ಜನ ಸಾಮಾನ್ಯರಿಗೆ ಈ ವಿಷಯವನ್ನು ಕನ್ನಡದಲ್ಲಿ ತಿಳಿಸಲು ಇಲಾಖೆಯ ಭಾಗವಾದ BARCಯಲ್ಲಿ ವಿಜ್ಞಾನಿಯಾಗಿದ್ದ ನಾನು ಉತ್ತರ ಕನ್ನಡದ ವಿವಿಧ ಭಾಗಗಳಲ್ಲಿ ನನ್ನ ಸಹೋದ್ಯೋಗಿಗಳೊಂದಿಗೆ ಸಂಚರಿಸಿ, ಜನರಲ್ಲಿ ಹುದುಗಿದ್ದ ಆತಂಕವನ್ನು ದೂರ ಮಾಡಲು ಯತ್ನಿಸಿದ್ದನ್ನು ಕಾರಂತರು ಗಮನಿಸಿದ್ದರು. ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ವಿಧಾನ ಸೌಧದಲ್ಲಿ ಕೈಗಾದ ಪರ ಮತ್ತು ವಿರೋಧ ಬಣಗಳನ್ನು ತಮ್ಮ ತಮ್ಮ ವಾದ ಮಂಡಿಸಲು ಆಹ್ವಾನಿಸಿದ್ದರು. ನಮ್ಮ ಇಲಾಖೆಯ (Dept of Atomic Energy) ಚೇರ್ಮನ್‌ರಾದ ಡಾ. ಎಂ.ಆರ್. ಶ್ರೀನಿವಾಸನ್ ತಮ್ಮ ತಂಡದಲ್ಲಿ ನನ್ನನ್ನು ಸೇರಿಸಿದ್ದರು. ಕಾರಂತರು ವಿರೋಧ ತಂಡದಲ್ಲಿದ್ದು ವಿಜ್ಞಾನಿಗಳೂ ನಾಚುವ ಹಾಗೆ ಅದ್ಭುತ ಭಾಷಣ ಮಾಡಿದರು. ನನ್ನನ್ನು ಕಂಡವರೆ, "ಇಲ್ಲಿಗೂ ಚಿತ್ತೈಸಿತಾ ನಿಮ್ಮ ಸವಾರಿ?" ಎಂದು ನಗುತ್ತ ಕೈಕುಲುಕಿದರು.

ಮುಂಬಯಿಗೆ ಕಾರಂತರ ಕೊನೆಯ ಭೇಟಿ ಅವರು ಗತಿಸುವ ಸುಮಾರು ವರ್ಷಗಳ ಮೊದಲು ನಡೆಯಿತು. ಮಹಾರಾಷ್ಟ್ರದ ವಿಜ್ಞಾನ ಪರಿಷತ್ತು ಆಯೋಜಿಸಿದ ವಿಜ್ಞಾನ ಸಮ್ಮೇಳನದಲ್ಲಿ ಶಿಖರ ಭಾಷಣ ಮಾಡಲು ಅವರನ್ನು ಆಹ್ವಾನಿಸಲಾಗಿತ್ತು.

ಅವರನ್ನು ಕರೆಯುವಂತೆ ಸೂಚಿಸಿದವರು ಡಾ. ಪಿ.ಎಸ್. ಶಂಕರ್ ಮತ್ತು ನಾನು. ಕಾರಂತರು ಮುಂಬಯಿಗೆ ಬಂದಾಗ ಹಿಂದೆ ಉಳಿದುಕೊಳ್ಳುತ್ತಿದ್ದುದು ಎಸ್.ಎನ್. ಮೂಡಬಿದ್ರಿ ಅಥವಾ ಕೆ.ಕೆ. ಹೆಬ್ಬಾರರ ಮನೆಯಲ್ಲಿ. ಇವರಿಬ್ಬರೂ ನಿಧನರಾದ ಬಳಿಕ ವ್ಯಾಸರಾಯ ಬಲ್ಲಾಳರ ಆತಿಥ್ಯ ಅವರಿಗಿತ್ತು. ಬಲ್ಲಾಳರೂ ಬೆಂಗಳೂರು ಸೇರಿದ್ದರಿಂದ ಮುಂಬಯಿಗೆ ಬರಬೇಕೋ ಬೇಡವೋ ಎಂದು ಅವರು ಮೀನ ಮೇಷ ಮಾಡುತ್ತಿದ್ದರು. ನಾನು ಅವರಿಗೆ ಪತ್ರ ಬರೆದು ನೀವು ಮುಂಬಯಿಗೆ ಬರಲೇಬೇಕು, ನಿಮ್ಮ ಬೇಕು ಬೇಡಗಳನ್ನು ನಿಭಾಯಿಸುವ ಜವಾಬ್ದಾರಿ ನನ್ನದು ಎಂದು ತಿಳಿಸಿದೆ. ಒಪ್ಪಿಗೆ ಸೂಚಿಸುವ ಮೊದಲು 'ಈ ಕುಳುವಾರಿ ಹೇಗೆ' ಎನ್ನುವ ಕುರಿತು ಮುಂಬಯಿಯ ತಮ್ಮ ಆಪ್ತ ವರ್ಗದಲ್ಲಿ ಪತ್ತೆದಾರಿಕೆ ನಡೆಸಿ, ಅವರೆಲ್ಲ ನನಗೆ ಗುಡ್ ಕಾಂಡಕ್ಟ್ ಸರ್ಟಿಫಿಕೇಟ್ ಕೊಟ್ಟ ಬಳಿಕ ನನ್ನ ಮನೆಯಲ್ಲಿ ತಂಗಲು ಒಪ್ಪಿಗೆ ಸೂಚಿಸಿದರು. ವಿಜ್ಞಾನ ಸಮ್ಮೇಳನದಲ್ಲಿ ಕಾರ್ಯನಿರತ ವಿಜ್ಞಾನಿಗಳೂ ಬೆಕ್ಕಸ ಬೆರಗಾಗುವಂತೆ ಇಂಗ್ಲಿಷ್‌ನಲ್ಲಿ ಅದ್ಭುತ ಭಾಷಣ ಮಾಡಿದ ಕಾರಂತರು ನನ್ನ ಜೊತೆ ಹಿಂದಿರುಗಲು ಸನ್ನದ್ಧರಾದಾಗ, ಸಮ್ಮೇಳನದ ಆಯೋಜಕರು ಟ್ಯಾಕ್ಸಿ ವೆಚ್ಚ, ವಸತಿ ಊಟೋಪಚಾರದ ಹಣವೆಂದು ದೊಡ್ಡ ಮೊತ್ತ ನೀಡಿದಾಗ ಕೇವಲ ವಿಮಾನ ಪ್ರಯಾಣದ ಶುಲ್ಕವನ್ನಷ್ಟೇ ತೆಗೆದುಕೊಂಡು, ನನ್ನತ್ತ ಬೊಟ್ಟುಮಾಡಿ, "ಇತರ ಎಲ್ಲ ವ್ಯವಸ್ಥೆ ಇವರು ಮಾಡಿದ್ದಾರೆ" ಎಂದರು. "ಸರ್, ನಿಮ್ಮ ಮನೆಯಿಂದ ಏರ್‌ಪೋರ್ಟಿಗೆ..." ಎಂದು ಅವರು ತೊದಲಿದಾಗ, "ನನ್ನ ಡ್ರೈವರ್ ಮಂಗಳೂರು ಏರ್‌ಪೋರ್ಟಿಗೆ ಬಿಟ್ಟಿದ್ದಾನೆ. ಮಂಗಳೂರಿನಿಂದ ಮನೆಗೆ ಮರಳುವಾಗ ಆತ ನನ್ನ ಕಾರು ತೆಗೆದುಕೊಂಡು ಬರುತ್ತಾನೆ. ಇದಕ್ಕೆಲ್ಲ ದುಡ್ಡು ಪಡೆಯುವ ದಾರಿದ್ರ್ಯ ನನಗೆ ಬಂದಿಲ್ಲ" ಎಂದು ಅವರದೇ ಆದ ವಿಶಿಷ್ಟ ಶೈಲಿಯಲ್ಲಿ ಹೇಳಿದಾಗ, ಉಳಿದ ಭಾಷಣಕಾರರಿಗೆ ಅವರು ಕೇಳಿದಷ್ಟು ಹಣ ಸುರಿದ ಸಮ್ಮೇಳನದ ಆಯೋಜಕರು ದಂಗಾದರು.

ಕಾರಂತರು ನಮ್ಮ ಮನೆಯಲ್ಲಿದ್ದ ಐದು ದಿನ ಅವರನ್ನು ಭೇಟಿ ಮಾಡಲು ಬಂದ ಜನರಿಗೆ ಲೆಕ್ಕ ಇಲ್ಲ. ಅವರು ನನ್ನ ಹೆಂಡತಿಗೆ ಅನ್ನಪೂರ್ಣೆ ಎಂದು ಹೆಸರಿಟ್ಟರು. ಬಂದವರಿಗೆಲ್ಲ ಕಾಫಿಯೊ ಶರಬತ್ತೊ ಊಟವೊ—ನಮ್ಮ ಮನೆಯಲ್ಲಿ ಆಗುತ್ತಿತ್ತು. ಕಾರಂತರದು ಮಿತ ಆಹಾರ ಸೇವನೆ. ನನ್ನ ಪತ್ನಿ ಮಾಡಿದ ತಂಬುಳಿ, ಉದ್ದಿಟ್ಟು, ಖೀರು ಅವರಿಗಿಷ್ಟವಾದ ಪದಾರ್ಥಗಳು. ಆಕೆಯ